
ಹೋಗಿತ್ತು. ಆವೊತ್ತು ರಾತ್ರಿ ಹೆಂಡತಿಯ ಕೈಯಲ್ಲಿ ಹಾಲು ಕುಡಿದ ತಂಗ್ಯನು ರಾತ್ರಿ ಪೂರ್ತಿ ಒದ್ದಾಡಿ ಹೋದ. ಹೆಂಡತಿ ಹಿಡಿದಿಡಿದು ಮೇಲೆ ಎಳೆದುಕೊಂಡರೆ ಉಸಿರು ಸಿಕ್ಕಿಹಾಕಿಕೊಂಡಂತಾಗುತ್ತಿತ್ತು. ಗದ್ದೆಗೆ ನೀರು ಕಟ್ಟಲು ರಾತ್ರಿಹೊತ್ತು ಕರೆಂಟ್ ರೂಮಿನ ಹತ್ತಿರ ಬರುತ್ತಿದ್ದ ಪಕ್ಕದ ಗದ್ದೆಯ ವೆಂಕಟರವಣಪ್ಪ ಚಳಿಗೆ ಕರೆಂಟ್ ರೂಮಿನ ಮುಂದೆ ಬೆಂಕಿ ಕಾಯಿಸುತ್ತಾ, "ಅಪ್ಪಯ್ಯ ತಂಗ್ಯ ನಿಂಗಿನ್ನ ಮದ್ವೆ ಆಗಿಲ್ಲ. ಹಂಗಾಗಿ ಸಂಸಾರದ ಆಳ ಅಗಲ ಅರ್ಥ ಆಗಿಲ್ಲ. ಹೆಂಡತಿ ಪಕ್ಕ ಮಲಕ್ಕಂಬೋದಂದ್ರೆ ಪುಗಸಟ್ಟೆ ಪುನುಗಲ್ಲಪ್ವೊ, ಎರಡು ತೆಂಗಿನ ಮರ ಹತ್ತಿಳ್ದಂಗಾಗ್ತೈತೆ." ಎಂದು ನಗುತ್ತಾ ಹೇಳುತ್ತಿದ್ದ ಮಾತುಗಳ ಒಳಾರ್ಥ ಈಗ ತಂಗ್ಯನಿಗೆ ಅರಿವಾಗತೊಡಗಿತ್ತು. ಆದರೂ ತನ್ನ ಕೈಲಾದ ಮಟ್ಟಿಗೆ ಮಲ್ಲಾಡಿದ್ದ. ರಾತ್ರಿಯೆಲ್ಲ ನಿದ್ದೆಗೆಟ್ಟಿದ್ದರಿಂದಲೋ ಏನೋ ಬೆಳಗ್ಗೆ ಆರೂವರೆಗೆಲ್ಲ ತಂಗ್ಯನಿಗೆ ಹೊಟ್ಟೆ ಅಬೋ ಅನ್ನುತ್ತಿತ್ತು. ಮುಖ ತೊಳೆದವನೆ ನಡುಮನೆಯಲ್ಲಿ ಕುಳಿತು, "ಅತ್ತೆಮ್ಮ ತಂಗ್ಳೇನಾದ್ರೂ ಇದ್ರೆ ಗಂಗ್ಳಾ ಹಾಕ್ರಿ." ಎಂದಿದ್ದ. ಅತ್ತೆ ಮನೆಯಲ್ಲಿ ಅಳಿಯ ನಾಚಿಕೊಳ್ಳಬೇಕಿಲ್ಲ.

"ಅಯ್ಯೋ ಅಳಿಯಂದ್ರೆ ಇನ್ನೊಂದಿಪ್ಪತ್ನಿಮ್ಷ ಇರಿ, ಬಿಸಿಬಿಸಿ ಉಪ್ಪಿಟ್ಟು ಮಾಡ್ತಿದ್ದೀನಿ." ಎಂದಿದ್ದರು ಅತ್ತೆ. ಹೆಂಡತಿ ನಿರ್ಮಲ ಅಕ್ಕನ ಗಂಡ ತುಮಕೂರು ಭಾವನೊಂದಿಗೆ ಏನೋ ಪಿಸಪಿಸ ಮಾತನಾಡುತ್ತಿದ್ದಳು. "ಹೊಟ್ಟೇಲಿ ಭಗ ಭಗ ಅಂಬ್ತಾ ಐತೆ, ದಿನಾ ಈಟೊತ್ತಿಗೆ ತಂಗ್ಳ್ ತಿಂದು ರೂಢಿ ಆಗ್ತೈತೆ. ಏನಾದ್ರೂ ಇದ್ರೆ ಇಕ್ಕಿ, ಉಪ್ಪಿಟ್ ಬೇಕಾದ್ರೆ ಆಮ್ಯಾಕೆ ತಿಂತೀನಿ." ಎಂದ ಪಟ್ಟು ಬಿಡದೆ ತಂಗ್ಯ. ಅತ್ತೆ ಬೇರೆ ದಾರಿ ಕಾಣದೆ ರಾತ್ರಿ ಉಳಿದಿದ್ದ ಅನ್ನ, ಹುಳಿ, ಉಪ್ಪಿನಕಾಯಿ ಸ್ಟೀಲ್ ತಟ್ಟೆಯಲ್ಲಿ ಹಾಕಿಕೊಟ್ಟಿದ್ದಳು. ತಂಗ್ಯ ಸಂತೃಪ್ತಿಯಿಂದ ಉಂಡಿದ್ದ. ಹೆಂಡತಿ ನಿರ್ಮಲ ತಂಗ್ಯನ ಈ ಪರಿಗೆ ಬೇಸರಪಟ್ಟುಕೊಂಡು, "ಇನ್ಮೇಲೆ ತಂಗಳು ಯಾವ ಕಾರಣಕ್ಕೂ ತಿನ್ನಬಾರದು." ಎಂದು ಕೋಪಿಸಿಕೊಂಡಿದ್ದಳು. ಅವಳ ಮಾತನ್ನು ಕೇಳಿದ ನಿರ್ಮಲಳ ಅಜ್ಜಿ, "ಅರೆ ಅಮ್ಮಯ್ಯ ತಂಗಳು ಬಲೋಳ್ಳೆದು ಸುಮ್ಕಿರು. ತಂಗಳು ತಿಂದ್ರೆ ಶರೀರದಲ್ಲಿ ಒಳ್ಳೆ ಶಕ್ತಿ ಉತ್ಪತ್ತಿ ಆಗ್ತೈತೆ. ನಮ್ಮ ಕಾಲದಲ್ಲಿ ಬರಿ ತಂಗಳು ತಿಂದೇ ಬೆಳೆದ್ವಿ ನಾವು." ಎಂದು ತಂಗ್ಯನಿಗೆ ಸಪೋರ್ಟು ಮಾಡಿದ್ದಳು. ತಂಗ್ಯನು ಅಜ್ಜಿಯ ಮಾತಿಂದ ಉತ್ತೇಜಿತನಾಗಿ, "ಅಜ್ಜಿ ನಾನು ದಿನವೂ ತಂಗ್ಳುಂಬ್ದೆ ಹೊರಕ್ಕೆ ಕಾಲಿಡಲ್ಲ. ನಮ್ಮೂರಲ್ಲಿ ನನ್ನ ಎಲ್ರೂ ತಂಗ್ಯ ಅಂತಾನೇ ಕರೆಯೋದು." ಎಂದಿದ್ದ. ಮನೆಯಲ್ಲಿ ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡಿದ್ದರು. ನಿರ್ಮಲಳಿಗೆ ಒಂದು ರೀತಿ ಅವಮಾನವಾದಂತಾಗಿ ಭಾವನ ಎದೆಗೆ ಮುಖವಿಟ್ಟು ಅತ್ತಳು. ಭಾವ ಅವಳ ಬೆನ್ನು ಸವರಿ ಸಮಾಧಾನಪಡಿಸಿದ್ದ. ಎಷ್ಟಾದರಾಗಲೀ ಪಿಯುಸಿ ಮತ್ತು ಡಿಗ್ರಿ ಓದುವಾಗ ತುಮಕೂರಿನಲ್ಲಿ ಭಾವನ ಮನೆಯಲ್ಲಿದ್ದವಳಲ್ಲವೆ! ಹೀಗೆ ಪ್ರಸ್ತದ ಮಾರನೆಯ ದಿನವೇ ತಂಗ್ಯನೊಂದಿಗೆ ಎಲ್ಲಾ ಪಾತ್ರಗಳು ಅನಾವರಣಗೊಂಡಿದ್ದವು.



ತಂಗ್ಯ ಹೆಂಡತಿಯನ್ನು ಕರೆದುಕೊಂಡು ಊರಿಗೆ ಬಂದಿದ್ದ. ಊರಿನ ಜನ ತಂಗ್ಯನ ಸೆಲೆಕ್ಷನ್ನನ್ನು ಕೊಂಡಾಡಿದ್ದರು. ಅವಳು ಹೊರಗೆ ಬರುತ್ತಿದ್ದದ್ದೇ ಕಡಿಮೆ. ಸೀರೆ ಬದಲು ನಾಜೂಕಾಗಿ ಚೂಡಿದಾರ್‌ನಲ್ಲಿಯೇ ಇರುತ್ತಿದ್ದಳು. ಸದಾ ತಲೆ ಬಾಚಿಕೊಂಡು, ಸೆಂಟ್ ಹಾಕಿಕೊಂಡು ಫ್ರೆಶ್ ಆಗಿ ಇರುತ್ತಿದ್ದಳು. ಒಂದೆರಡು ಸಾರಿ ಸುವೇಗಾದಲ್ಲಿ ತಂಗ್ಯನ ಜೊತೆ ಹೊಲದ ಹತ್ತಿರ ಹೋಗಿ ಬಂದಿದ್ದಳು. ದನದ ಕೊಟ್ಟಿಗೆಯ ಕೆಲಸವಿರಲಿ ಅಡುಗೆ ಮನೆಯ ಕೆಲಸ ಕೂಡಾ ಮಾಡುತ್ತಿರಲಿಲ್ಲ. ಸದಾ ಮೊಬೈಲ್ ಫೋನಿನಲ್ಲಿ ಮಾತನಾಡುತ್ತಿರುವುದು ಇಲ್ಲವೇ ಟೀವಿಯಲ್ಲಿ ಧಾರಾವಾಹಿ ನೋಡುತ್ತಿರುವುದು ಮಾಡುತ್ತಿದ್ದಳು. ತಾನು ತಿಂದ ತಟ್ಟೆಯನ್ನು ಕೂಡಾ